ನಾಲ್ಕು ಗೋಡೆಗಳಿಂದ ನಿರ್ಮಾಣವಾದ 'ಜಾಗ' ಆಗಿರಲಿಕ್ಕೆ ಸಾಧ್ಯವಿಲ್ಲ. ಆ ಕೋಣೆಯ ಖಾಲಿತನದಲ್ಲಿ ಕವಿಯೊಬ್ಬ ಬರೆಯದೆಯೂ ಕಾಣಿಸಿಕೊಡಬಹುದಾದ ದುಗುಡ ದುಮ್ಮಾನ ನಿಟ್ಟುಸಿರುಗಳ ಗಣನೆ ಯಂತ್ರಕ್ಕೆ ಇರುವುದಿಲ್ಲ. ಸಂಭನೀಯತೆಯ ಸಾಧ್ಯತೆಗಳನ್ನು ಯಂತ್ರವೊಂದು ತೋರಿಸಿಕೊಟ್ಟರೆ, ಕವಿಯ ಶಕ್ತಿಯಿರುವುದು ಅದೇ ಸಂಭವನೀಯತೆಯ ಅಸಾಧ್ಯತೆಗಳನ್ನೇ ತೋರಗೊಡಿಸುವುದರಲ್ಲಿ.

ಅದೆಲ್ಲ ಸರಿ, ಆದರೆ ಈ ಗೊಂದಲಗಳೆಲ್ಲಾ ಉಂಟಾಗುವುದು ಸಾಹಿತ್ಯ ಪ್ರಕಾರವೊಂದರ ಕರ್ತೃ ಯಾರು ಎಂಬ ಅರಿವಿದ್ದಾಗ ತಾನೇ? ಯಂತ್ರದ ಕವಿತೆಗೂ ಓದುಗ ಹಲವು ಅರ್ಥಗಳನ್ನು ಆರೋಪಿಸಿಕೊಳ್ಳಬಹುದಲ್ಲ? ಅಂದಮೇಲೆ, ಕವನವೊಂದು 'ಜೀವ ಪಡೆಯುವುದು' ಅದರ ಸೃಷ್ಟಿಯಲ್ಲೋ ಅಥವಾ ಅದನ್ನೋದುವ ವ್ಯಕ್ತಿಯ ಮನದಲ್ಲೋ? ಅಥವಾ ಇದು ಮ್ಯೂಚುಯಲ್ಲೋ? ಹೀಗಿರುವಾಗ ಓರ್ವ ಸಾಮಾನ್ಯ ಓದುಗನಿಗೆ ಪದ್ಯ ಬರೆದದ್ದು ಯಂತ್ರವೋ ಅಥವಾ ಮನುಷ್ಯನೋ ಎಂಬುದು ಗಣ್ಯವಾದೀತೆ?

***

ಸಂಭವನೀಯ ಅಷ್ಟೂ ನಡೆಗಳನ್ನು ತನ್ನೊಳಗೆ ಏಕೀಕರಿಸಿಕೊಂಡ ಯಂತ್ರವೊಂದು ಆಡುವ ಚದುರಂಗದಾಟ ಶ್ರೇಷ್ಠವೋ ಅಥವಾ ಮುಂದಿನ 14 ಸಂಭವನೀಯ ನಡೆಗಳನ್ನು ಊಹಿಸಬಲ್ಲ ಚೆಸ್ ದಿಗ್ಗಜ ಗ್ಯಾರಿ ಕ್ಯಾಸ್ಪರೋವ್‌ನ ಆಟ ಪ್ರಶಂಸನೀಯವೋ? (ಬೇಕಂತಲೇ ತಪ್ಪು ನಡೆ ನಡೆಸಿ ಯಂತ್ರವನ್ನೇ ಪೇಚಿಗೆ ಸಿಲುಕಿಸಿ ಮಜಾ ನೋಡುವ ಉಡಾಫೆಯೂ ಮನುಷ್ಯನಿಗೆ ಮಾತ್ರ ಸಾಧ್ಯ). ಹಾಗೇ, ಕಂಪ್ಯೂಟರೊಂದರ ಜೊತೆ ಆಡುವ ರಮ್ಮಿಯಲ್ಲಿ ಸೊಗಸಿದೆಯೋ ಅಥವಾ ನಾಲ್ಕು ಜನರೊಡನೆ ಆಡುವುದರಲ್ಲಿಯೋ? ಸುತ್ತ ಕುಳಿತ ಜನರ ಬಿಸಿಯುಸಿರು, ಖುಷಿ, ನೋವು, ಹತಾಶೆ, ಕ್ರೋಧ, ಹಮ್ಮುಗಳ ಸಂಗಮದಲ್ಲೇ ರಮ್ಮಿ ಆಟದ ಕಳೆಯಿರಬಹುದೇ? ಜೂಜಿನಲ್ಲಿ ಗೆಲುವೆಂಬುದು ಕೇವಲ ದಾಳಗಳುರುಳುವ ಸಂಭವನೀಯತೆಗೆ ಮಾತ್ರ ಸೀಮಿತವೋ ಅಥವಾ ಎದುರಾಳಿಯನ್ನು ಭಾವನಾತ್ಮಕವಾಗಿ ಹಣಿಯುವುದು, ಕೇಕೆ ಅಟ್ಟಹಾಸಗಳಿಂದ ಬೆದರಿಸುವುದು, ಇತ್ಯಾದಿ ತಂತ್ರಗಳಿಗೂ ಅಲ್ಲಿ ಪ್ರಾಮುಖ್ಯತೆ ಇದೆಯೋ?

ಇವೆಲ್ಲವನ್ನೂ ಪರಿಗಣಿಸಿ, ಆಟವಾಗಲಿ, ಸಾಹಿತ್ಯವಾಗಲಿ ಯಂತ್ರಜನಿತವಾಗಿದ್ದರೆ ಶುಷ್ಕವಾಗಿರುತ್ತದೆ ಎನ್ನುವ ತೀರ್ಮಾನಕ್ಕೆ ಬರಬಹುದು ನಾವು. ಆದರೆ, ಬಯಲಿನ ಆಟವನ್ನೆಲ್ಲ ಮೈಗೆ ಮಣ್ಣು ಸೋಕಿಸಿಕೊಳ್ಳದೇ ಕಂಪ್ಯೂಟರ್ ಪರದೆಯ ಮೇಲೆ ಆಡಬಯಸುವ ಹಾಗೂ ಅದೇ ಆಪ್ಯಾಯವೆನ್ನುವ ಜನಾಂಗವೊಂದು ಇಂದು ನಮ್ಮೆದುರಿಗೇ ಹಿರಿದಾಗಿ ಬೆಳೆಯುತ್ತಿದೆಯಲ್ಲ? ಅವರ ಅಭಿಪ್ರಾಯ ಏನಿರಬಹುದು ಈ ವಿಷಯದಲ್ಲಿ? 'ಸೃಷ್ಟಿ'ಯೆಂಬುದು ಪ್ರಕೃತಿಯಿಂದ ಮಾತ್ರ ಸಾಧ್ಯ ಎಂಬುದೂ, ಸೃಷ್ಟಿ–ಮರುಸೃಷ್ಟಿಗಳ ನಡುವಿನ ವ್ಯತ್ಯಾಸ ಏನೆಂಬುದು ಅವರಿಗೆ ಮನವರಿಕೆಯಾದೀತೇ?

ಒಟ್ಟಾರೆ ಹೇಳುವುದಾದರೆ, ಕಂಪ್ಯೂಟರೊಂದು ಎಲ್ಲ ಸಂಭಾವ್ಯತೆಗಳನ್ನು ಅಳವಡಿಸಿಕೊಂಡು ತಯಾರಿಸುವ ಉತ್ಪನ್ನ (ಅದು ಸಾಹಿತ್ಯ, ವ್ಯಾಪಾರ, ತಂತ್ರಜ್ಞಾನ ಹೀಗೇ ಯಾವುದೇ ಕ್ಷೇತ್ರವಾಗಿರಲಿ) ಹಾಗೂ ಮನುಷ್ಯ ಉಪಯೋಗಿಸುವ ಸಂಭವನೀಯ ಸೂತ್ರಗಳ ಸಾಧ್ಯತೆ–ಬಾಧ್ಯತೆಗಳ ಸಮಗ್ರ ತುಲನೆ ಸರಳವಲ್ಲ. ಅದು ಮತ್ತಷ್ಟು ಪ್ರಶ್ನೆಗಳನ್ನು ನಮ್ಮೆದುರಿಗೆ ಒಡ್ಡುವಂಥದ್ದು.

***

ಇವನ್ನೆಲ್ಲಾ ಅವಲೋಕಿಸಿದ ಮೇಲೆ,

**'God does not play dice with the universe'** ಎನ್ನುವ ಐನ್‌ಸ್ಟೀನನ ಬಲು ಚರ್ಚಿತ ಹೇಳಿಕೆಯನ್ನು ಯಾವ ರೀತಿಯಲ್ಲಿ ಅರ್ಥೈಸೋಣ? 'ದೇವರ ಆಟದ ದಾಳದಲ್ಲಿ ಯಾವ ಸಂಭವನೀಯತೆಗೂ ಆಸ್ಪದವಿಲ್ಲ. ಆತನದೇನಿದ್ದರೂ ನಿಖರ ಆಟ' ಎಂಬುದಾಗಿಯೇ? ಅಥವಾ, 'ಆತ ಇಲ್ಲಿ ದೇವರು ಹಾಗೂ ದಾಳ ಎನ್ನುವ ಪದಗಳನ್ನು ಸಂಕೇತವಾಗಿ ಬಳಸಿದ್ದಾನೆ, ವಾಸ್ತವವಾಗಿ ಆತ ಹೇಳುತ್ತಿರುವುದು ಭೌತಶಾಸ್ತ್ರದ ಕ್ವಾಂಟಮ್ ಮೆಕಾನಿಕ್ಸ್ ಸಿದ್ಧಾಂತದ ಕುರಿತು' ಎಂಬುದಾಗಿಯೋ?

●

